

# ಆರ್‌ಟಿಇ ಕಾಯ್ದೆ ಮತ್ತು ಸಮನ್ವಯ ಹಾಗೂ ತಾರತಮ್ಯರಹಿತ ಶಾಲೆಗಳು

ನದೀಂ ಆಲಿ ಹೈದರ್ ಖಾನ್

ದೇಶದ ಕಾರ್ಯನೀತಿ ತಯಾರಕರು ಮಕ್ಕಳು ಅತ್ಯಾವಶ್ಯಕ ವರ್ಗವಲ್ಲ ಮತ್ತು ಮತದಾರ ವರ್ಗವಾಗಿ ದುರ್ಬಲರು ಅಥವಾ ಅವರಿಗೆ 'ಮತ ಮೌಲ್ಯ' ಇಲ್ಲವೆಂದು ಪರಿಗಣಿಸಿರುವುದರಿಂದಲೇ ಬಹುಶಃ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣವನ್ನು ಕಾನೂನಾಗಿ ಜಾರಿಗೊಳಸಲು ಇಷ್ಟೊಂದು ದೀರ್ಘಾವಧಿ ಬೇಕಾಯಿತು ಎನ್ನಬಹುದು. ಮಕ್ಕಳಗೆ ಪ್ರಜಾಪ್ರಭುತ್ವದಲ್ಲಿ ಸಕ್ರಿಯ ಪಾತ್ರವಿಲ್ಲ ಮತ್ತು ಪರೋಕ್ಷ ಹಾಗೂ ಪ್ರಾತಿನಿಧ್ಯ ಪ್ರಜಾಪ್ರಭುತ್ವದಲ್ಲಿ ತಮಗೆ ಬೇಕಾದದ್ದನ್ನು ಕೇಳ ಪಡೆಯಲು ಅವರು ಅತ್ಯಂತ ಕಡಿಮೆ ಅವಕಾಶ ಹೊಂದಿದ್ದಾರೆ. ಈ ಮೂಲಭೂತ ಹಕ್ಕಿನ ಏಕೈಕ ಫಲಾನುಭವಿಗಳು ಮಕ್ಕಳೇ ಆಗಿದ್ದರೂ ಅವರು ಯಾವತ್ತೂ ಅದರಲ್ಲಿ ನಿರ್ಣಯಿಸುವವರಾಗದೆ ಕೇವಲ ಪಡೆಯುವವರಾಗಿಯೇ ಇರುತ್ತಾರೆ. ಇಂಥ ಪರಿಸ್ಥಿತಿಯು ಸಮನ್ವಯ ಶಿಕ್ಷಣದ ವಿಕಾಸವನ್ನು ದುಸ್ತರದ ಕೆಲಸವನ್ನಾಗಿಸುತ್ತದೆ. ಅವರ ಅಗತ್ಯತೆಗಳನ್ನು ಸಾಮಾನ್ಯವಾಗಿ ತತ್ವಗಳು, ಮೌಲ್ಯಗಳು ಮತ್ತು ಸಂಸ್ಕೃತಿಯ ವಾಹಕರಾಗಿರುವ ಅವರ ತಂದೆತಾಯಿಯರು, ಕುಟುಂಬಗಳು, ಜಾತಿ, ಪಂಗಡ, ಸಮೂಹ ಮತ್ತು ಸಮಾಜದ ದೃಷ್ಟಿಕೋನದಿಂದ ಊಹಿಸಲಾಗಿರುತ್ತದೆ. ಅವು ಯಾವಾಗಲೂ ಸಂವಿಧಾನದ ಮೌಲ್ಯಗಳೊಂದಿಗೆ ಹೊಂದಿಕೊಂಡಿರಬೇಕೆಂದೇನೂ ಇಲ್ಲ ಮತ್ತು ಸಾಮಾನ್ಯವಾಗಿ ಪುರುಷಪ್ರಧಾನ, ಊಳಗಮಾನ್ಯ, ಜಾತಿವಾದಿ, ಮತ್ತು ಕೋಮು/ಧರ್ಮದ ಆಧಾರವನ್ನು ಹೊಂದಿದ್ದು ಬಹಿಷ್ಕಾರ ಮತ್ತು ಪಕ್ಷಪಾತದ ಸ್ವಭಾವದ್ದಾಗಿರುತ್ತದೆ. ಎನ್‌ಸಿಎಫ್, ಎನ್‌ಸಿಇಆರ್‌ಟಿ ಗಳ ಪ.ಜಾ. ಮತ್ತು ಪ.ಪಂ. ಹಾಗೂ ಬಾಲಕಿಯರ ಶಿಕ್ಷಣದ ಬಗೆಗಿನ ವಸ್ತುಸ್ಥಿತಿ ಲೇಖನಗಳು ಮತ್ತು ನ್ಯಾಯಮೂರ್ತಿ ರಾಜಿಂದರ್ ಸಾಚಾರ್ ಕಮಿಷನ್‌ನ ವರದಿಗಳು "ಪ.ಜಾ ಮತ್ತು ಪ.ಪಂ. ಮತೀಯ ಅಲ್ಪಸಂಖ್ಯಾತರ ಮಕ್ಕಳು ಮತ್ತು ಹೆಣ್ಣುಮಕ್ಕಳು ಪ್ರಾಥಮಿಕಶಾಲೆಗಳಲ್ಲಿ ತಾರತಮ್ಯಕ್ಕೆ ಒಳಗಾಗುತ್ತಾರೆ ಎಂದು ದೃಢಪಡಿಸುತ್ತವೆ. ಇದೇ ಈ ಮಕ್ಕಳ ಕಡಿಮೆ ದಾಖಲಾತಿ ಮತ್ತು ಹೆಚ್ಚು ಸಂಖ್ಯೆಯಲ್ಲಿ ಮಧ್ಯದಲ್ಲೇ ಶಾಲೆ ಬಿಡುವುದಕ್ಕೆ ಕಾರಣವಾಗುತ್ತದೆ.

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಮಕ್ಕಳ ಹಕ್ಕಿನ ಕಾಯ್ದೆ, 2009 ಮಕ್ಕಳು ಯಾವುದೇ ಜಾತಿ, ವರ್ಗ, ಲಿಂಗ , ಧರ್ಮ ಮತ್ತು ಇತರ ಸಾಮಾಜಿಕ-ಸಾಂಸ್ಕೃತಿಕ ಹಾಗೂ ಆರ್ಥಿಕ ವಿಭಾಗಕ್ಕೆ ಸೇರಿರಲಿ ಅದನ್ನು ಗಣನೆಗೆ ತೆಗೆದುಕೊಳ್ಳದೇ ಎಲ್ಲರಿಗೂ ಪ್ರಾಥಮಿಕ ಶಿಕ್ಷಣವನ್ನು ಒದಗಿಸ ಬೇಕೆಂದು ಕಾನೂನನ್ನು ಮಾಡಿರುತ್ತದೆ. ತಾರತಮ್ಯಮುಕ್ತ ಶಾಲೆಗಳನ್ನು ಉತ್ತೇಜಿಸುವುದು ಮತ್ತು ಒದಗಿಸುವುದು ಇದರ ಉದ್ದೇಶ ಹಾಗು ಇದಕ್ಕಾಗಿ ಶಾಲೆಗಳಲ್ಲಿ ತಾರತಮ್ಯ ಇಲ್ಲದಂತೆ ಮೇಲ್ವಿಚಾರಣೆ ನಡೆಸುವುದು, ಸಮಸ್ಯೆ ಬಂದಾಗ ಕ್ರಮಕೈಗೊಳ್ಳುವುದು, ಅದನ್ನು ತಡೆಗಟ್ಟುವುದು ಮತ್ತು ಪರಿಹರಿಸುವುದು ಮುಂತಾದ ಅಧಿಕಾರಗಳನ್ನು ಸಮುದಾಯಕ್ಕೆ ಮತ್ತು ಸ್ಥಳೀಯ ಸಂಸ್ಥೆಗಳಗೆ ಕೊಡುತ್ತದೆ.

ಶಾಲೆಗಳಲ್ಲಿನ ಸಮನ್ವಯದ ಪ್ರಶ್ನೆಯನ್ನು ವಿಭಿನ್ನ ನಿಲುವುಗಳಂದ ನೋಡಬಹುದು ; ಸಮಾಜದ ಜನಸಂಖ್ಯೆ ವೈವಿಧ್ಯ (ನಾನಿದನ್ನು ನೆರೆಹೊರೆ ಕೇಂದ್ರಿತ ನಿಲುವು ಎನ್ನುತ್ತೇನೆ), ಮಕ್ಕಳ ಗುರುತಿಸುವಿಕೆ, ವರ್ಗೀಕರಣ ಮತ್ತು ವಿಂಗಡಣೆ, ಪ್ರಾತಿನಿಧ್ಯ, ಭಾಗವಹಿಸುವಿಕೆ, ವಿಷಯ, ಪಠ್ಯಕ್ರಮ ಮತ್ತು ಶಿಕ್ಷಣಶಾಸ್ತ್ರ, ಹಾಗೂ ಆರ್ಥಿಕ ದೃಷ್ಟಿಕೋನ. ಈ ಎಲ್ಲಾ ದೃಷ್ಟಿಕೋನಗಳು ಆರ್.ಟಿ.ಇ ಕಾಯ್ದೆಯನ್ನು ಅಂದರೆ ಸಮನ್ವಯಕ್ಕೆ ಸಂಬಂಧಪಟ್ಟಂತೆ ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಬಹು ಮುಖ್ಯವಾದವುಗಳು.

ಮೊದಲನೆಯದಾಗಿ, ಯಾರು ಯಾರು ನೆರೆಹೊರೆಯಲ್ಲಿದ್ದಾರೆ ಎಂಬುದು ಅಂದರೆ ಜಾತಿ, ವರ್ಗ, ಧರ್ಮ ಅಥವಾ ಜನಾಂಗೀಯ ಪಂಗಡಗಳು ನೆರೆಹೊರೆಯ ಶಾಲೆಗಳ ಸ್ವರೂಪವನ್ನು ನಿರ್ಧರಿಸುತ್ತವೆ. ಆದ್ದರಿಂದ, ಆರ್.ಟಿ.ಇ ಕಾಯ್ದೆಯು ಶಾಲೆಗಳ ಮೂಲಕ ನಡೆಯುವ ಸಾಮಾಜಿಕ ಜನ ವೈವಿಧ್ಯಾಧಾರಿತ ಬೇರ್ಪಡಿಸುವಿಕೆಯ ಪ್ರಶ್ನೆಗೆ ಪರಿಹಾರ ನೀಡಲು ಉದ್ದೇಶಿಸುತ್ತದೆಯೇ? ಮತ್ತು ಹೇಗೆ ಪರಿಹರಿಸುತ್ತದೆ? ಇದನ್ನು ಪರಿಣಾಮಕಾರಿಯಾಗಿ ಪರಿಹರಿಸದಿದ್ದಲ್ಲಿ ಇದು ಶಾಲೆಗಳನ್ನು ಒಂದುಗೂಡಿಸುವ ಸ್ಥಳವಾಗಿಸದೇ ಬೇರ್ಪಡಿಸುವಿಕೆಯ ಸ್ಥಳವಾಗಿಸುವುದಿಲ್ಲವೇ? ಎಂಬ ಅತಿಮುಖ್ಯ ಪ್ರಶ್ನೆಯೊಂದು ಕೇಳಬರುತ್ತದೆ.

ಎರಡನೆಯದಾಗಿ, ಉದ್ಭವಿಸುವ ಪ್ರಶ್ನೆ ಖಾಸಗಿ ಶಾಲೆಗಳಲ್ಲಿ ಶೇ 25 ಮೀಸಲಾತಿಯು ಅನುಕೂಲವಂಚಿತ ಗುಂಪುಗಳಗೆ

(ಇನ್ನುಮುಂದೆ ಸಿ–ಡಿಜಿ) ಮತ್ತು ದುರ್ಬಲ ವರ್ಗಗಳಿಗೆ (ಇನ್ನುಮುಂದೆ ಸಿ–ಡಬ್ಲ್ಯುಎಸ್) ಪ್ರಾತಿನಿಧ್ಯ ಸಿಗುವಂತೆ ಎಲ್ಲಿಯವರೆಗೆ ನೋಡಿಕೊಳ್ಳುತ್ತದೆ? ಹಾಗೂ ಯಾವುದೇ ವರ್ಗ ಮತ್ತು ಪಂಗಡವಿರಲಿ ಅದನ್ನು ಗಣನೆಗೆ ತೆಗೆದುಕೊಳ್ಳದೇ ಪ್ರಾಥಮಿಕ ಶಿಕ್ಷಣವನ್ನು ಎಲ್ಲರಿಗೂ ಸಿಗುವಂತೆ ಸಹಾಯ ಮಾಡುತ್ತದೆಯೇ ಮತ್ತು ಖಾಸಗಿ ಮತ್ತು ನೆರೆಹೊರೆಯ ಶಾಲೆಗಳನ್ನು ಎಲ್ಲಿವರೆಗೆ ಸಮಾವೇಶ ಮಾಡಬಲ್ಲದು?

ಮೂರನೆಯದಾಗಿ ಈ ರೀತಿ ಭಾಗವಹಿಸುವಿಕೆಯು ಶಾಲಾ ವ್ಯವಸ್ಥೆಯನ್ನು ತಳದಿಂದ ತುದಿವರೆಗೆ ಅರ್ಥ ಮಾಡಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಫಲಾನುಭವಿಗಳು ಮತ್ತು ಹಿತಾಸಕ್ತಿದಾರರ ಭಾಗವಹಿಸುವಿಕೆಯು ಚೆನ್ನಾಗಿದ್ದಷ್ಟೂ ಶಾಲೆಯನ್ನು ಚೆನ್ನಾಗಿ ರೂಪುಗೊಳಸುತ್ತದೆ, ಸಮುದಾಯಕ್ಕೆ ಈ ಶಾಲೆ ನಮ್ಮದು ಎಂಬ ಭಾವನೆ ಮೂಡಿಸಿ ಇತರರಿಗೆ ಮಾದರಿಯಾಗಿಸುತ್ತದೆ ಮತ್ತು ಅವರ ಹೆಬ್ಬಯಕೆಗೆ ಸರಿಯಾಗಿ ಶಾಲೆಯು ಬೆಳೆಯುವಂತೆ ಮಾಡುತ್ತದೆ. ಆರ್.ಟಿ.ಇ. ಕಾಯ್ದೆಯ ಚೌಕಟ್ಟು ಎಸ್.ಎಮ್.ಸಿ, ಸ್ಥಳೀಯ ಸಂಸ್ಥೆಗಳು,ಶಾಲಾಭಿವೃದ್ಧಿ ಯೋಜನೆ, ಸಮುದಾಯದಿಂದ ಮೇಲ್ವಿಚಾರಣೆ ಮತ್ತು ಸಮಾಜದಿಂದ ಕಾರ್ಯಪರಿಶೀಲನೆ ಇವುಗಳ ರೂಪದಲ್ಲಿ ಭಾಗವಹಿಸುವಿಕೆಗೆ ಅವಕಾಶವನ್ನು ಒದಗಿಸುತ್ತದೆ. ಹೀಗಿದ್ದರೂ ಈ ಹಂತದಲ್ಲಿ ಇರುವ ಪ್ರಶ್ನೆ ಎಂದರೆ, ಸಮೂಹ ಭಾಗವಹಿಸುವಿಕೆಯ ಪ್ರಕ್ರಿಯೆಯದು: ಅಂತಹ ಪ್ರಕ್ರಿಯೆಗಳು ಯಾವ ರೀತಿಯಲ್ಲಿ ಈಗಿರುವ ಸಾಮಾಜಿಕ, ಸಾಂಸ್ಕೃತಿಕ ಮತ್ತು ಸಾಂಸ್ಥಿಕ ರಚನೆಯನ್ನು ಪ್ರಶ್ನಿಸುತ್ತವೆ ಮತ್ತು ಸಮಸ್ಯೆಗಳನ್ನು ಬಗೆಹರಿಸುತ್ತವೆ ಹಾಗೂ ಸಮನ್ವಯ, ಯೋಜನೆ, ಪರಿವೀಕ್ಷಣೆಯನ್ನು ಹೇಗೆ ಸಾಧ್ಯಗೊಳಸುತ್ತವೆ ಎಂಬುದು.

ಕೊನೆಯದಾಗಿ ಹಣಕಾಸು ಲಭ್ಯತೆ ಮತ್ತು ಸಂಪತ್ತಿನ ಹಂಚಿಕೆಯು ಬಹು ಮುಖ್ಯವಾದ ಕಳಕಳಯಾಗಿದೆ. ಆರ್‌ಟಿಇ ನೀತಿಯು ಬಹು ಮಹಾತ್ವಾಕಾಂಕ್ಷೆಯುಳ್ಳ ಕಾನೂನು ಆಗಿದ್ದು, ಇದು ಆರ್ಥಿಕ ಒಳಹರಿವು ಸುಸ್ಥಿರವಾಗಿ ಬರುವಂತೆ ನೋಡಿಕೊಳ್ಳುವ ಸವಾಲನ್ನು ಎದುರಿಸುವುದೇ ಅಲ್ಲದೆ ಹಣದ ಹಂಚಿಕೆಯನ್ನು ಕ್ರಮೇಣ ಹೆಚ್ಚುವಂತೆ ನೋಡಿಕೊಳ್ಳಬೇಕಾಗಿದೆ. ಅಜೀಂ ಪ್ರೇಂಜಿ ಫೌಂಡೇಷನ್‌ನ ಹೊಣೆಗಾರಿಕೆಯ ಕಾರ್ಯಕ್ರಮವು (Accountability Initiative) 2009–10 ರ ಡಿಐಎಸ್‌ಇ ಅಂಕಿ ಅಂಶಗಳ ಮತ್ತು ಸರ್ವ ಶಿಕ್ಷಣ ಅಭಿಯಾನ ಹಣಕಾಸು ವರದಿಯ ಆಧಾರದ ಮೇಲೆ ಪ್ರಾಥಮಿಕ ಶಿಕ್ಷಣಕ್ಕಾಗಿ ರಾಜ್ಯಗಳು ಮತ್ತು ಕೇಂದ್ರಸರ್ಕಾರವು ಮಾಡುತ್ತಿರುವ ವಾರ್ಷಿಕ ತಲಾವಾರು ವೆಚ್ಚದ ನಡುವಿನ ಅಸಮಾನತೆಯನ್ನು ಎತ್ತಿತೋರಿಸಿದೆ. ಒಂದು ಕಡೆ ಮೇಘಾಲಯ ಮತ್ತು ಕೇರಳ ರಾಜ್ಯಗಳು ಕ್ರಮವಾಗಿ ರೂ.23,000 ಮತ್ತು ರೂ 19,000 ಗಳನ್ನು ತಲಾವಾರು ವೆಚ್ಚಮಾಡಿದರೆ ಪಶ್ಚಿಮ ಬಂಗಾಳ ಕೇವಲ 3500 ರೂ ಗಳನ್ನು ಖರ್ಚು ಮಾಡುತ್ತದೆ. ಕೇವಲ 10 ರಾಜ್ಯಗಳ ತಲಾವಾರು ವೆಚ್ಚವು ರಾಷ್ಟ್ರೀಯ ಸರಾಸರಿ ವೆಚ್ಚವಾದ ರೂ. 9500 ಗಳಿಗಿಂತ ಹೆಚ್ಚಾಗಿರುತ್ತದೆ. ಒಂದು ಕಡೆಯಲ್ಲಿ ಇದನ್ನು ಸಮನಾಗಿಸುವುದು ಅದನ್ನು ಮತ್ತೊಂದೆಡೆ ಹೆಚ್ಚಿಸುವುದು ಪ್ರಮುಖ ಸವಾಲಾಗಿದೆ.

## ಮಕ್ಕಳನ್ನು ಗುರುತಿಸುವುದು, ವರ್ಗೀಕರಣ, ವಿಭಾಗೀಕರಣ ಮತ್ತು ಅನುಕೂಲವಂಚಿತ ಗುಂಪುಗಳು ಹಾಗೂ ದುರ್ಬಲ ವರ್ಗಕ್ಕೆ ಸೇರಿದ ಮಕ್ಕಳ ಸಮನ್ವಯವನ್ನು ಕುರಿತಾದ ವಿಚಾರ

ಆರ್‌ಟಿಇ ಕಾಯ್ದೆಯು ಸಿ–ಡಿಜಿ (ಅನುಕೂಲವಂಚಿತ ಗುಂಪುಗಳು) ಮತ್ತು ಸಿ–ಡಬ್ಲ್ಯುಎಸ್(ದುರ್ಬಲ ವರ್ಗ) ವರ್ಗದ ಮಕ್ಕಳಿಗೆ 8ನೇ ತರಗತಿಯವರೆಗಿನ ಶಿಕ್ಷಣವನ್ನು ಅನುದಾನರಹಿತ ಅಲ್ಪಸಂಖ್ಯಾತ ಶಾಲೆಗಳು ಮತ್ತು ಕೇಂದ್ರೀಯ ವಿದ್ಯಾಲಯ, ಜವಾಹರ ನವೋದಯ ವಿದ್ಯಾಲಯ ಮತ್ತು ಸೈನಿಕ ಶಾಲೆ ಇತ್ಯಾದಿ ನಿರ್ದಿಷ್ಟ ಶಾಲೆಗಳ ಹೊರತಾಗಿ ಎಲ್ಲ ಖಾಸಗಿ ಶಾಲೆಗಳಲ್ಲಿ ಉಚಿತವಾಗಿ ಒದಗಿಸಬೇಕೆಂದು ನಿಯಮಿಸಿರುತ್ತದೆ. ಇದರ ಅನುಗುಣವಾಗಿ ಇಂತಹ ಶಾಲೆಗಳಲ್ಲಿ ಒಂದನೇ ತರಗತಿಯಲ್ಲಿ ಒಟ್ಟು ಲಭ್ಯ ಸೀಟುಗಳಲ್ಲಿ ಶೇ 25 ರಷ್ಟನ್ನು ಸಿ–ಡಿಜಿ ಮತ್ತು ಸಿ–ಡಬ್ಲ್ಯುಎಸ್ ವರ್ಗದವರಿಗೆ ಕಾಯ್ದಿರಿಸುವುದು ಅವಶ್ಯವಾಗಿದೆ. [ಆರ್.ಟಿ.ಇ ಕಾಯ್ದೆಯ ಸೆಕ್ಷನ್ 12(1) (ಸಿ)].

ಆರ್‌ಟಿಇ ನೀತಿಯು ಪ.ಜಾ. ಮತ್ತು ಪ.ಪಂ. ಮಕ್ಕಳಿಗಾಗಿ ಎರಡು ವಿಶಾಲವಾದ ಗುಂಪುಗಳನ್ನು ಸಿ–ಡಿಜಿ ಯಲ್ಲಿ ಹೊಂದಿದೆ ಮತ್ತು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗ ಅಥವಾ ಇನ್ಯಾವುದೇ ಗುಂಪನ್ನು ಸಾಮಾಜಿಕವಾಗಿ, ಸಾಂಸ್ಕೃತಿಕ, ಆರ್ಥಿಕ, ಭೌಗೋಳಿಕ, ಭಾಷಿಕ ಹಾಗೂ ಲಿಂಗಕ್ಕೆ ಸಂಬಂಧಿಸಿದ ವಿಷಯದ ಆಧಾರದ ಮೇಲಿನ ಸೇರ್ಪಡಿಸಿಕೊಳ್ಳುವುದನ್ನು ರಾಜ್ಯ ಸರ್ಕಾರಕ್ಕೆ ಬಿಟ್ಟುಕೊಟ್ಟಿದೆ [ಸೆ 2(d)]. ರಾಜ್ಯ ಸರ್ಕಾರವು ನಿರ್ಧರಿಸುವ ಆದಾಯದ ಆಧಾರದ ಮೇಲೆ ಸಿ–ಡಬ್ಲ್ಯುಎಸ್ ಅನ್ನು ವರ್ಗೀಕರಿಸಲಾಗುವುದು [ಸೆ. 2(ಡಿ)]. ಕೇವಲ ಹದಿನೈದು ರಾಜ್ಯಗಳು ಮಾತ್ರ ಸಿ–ಡಿಜಿ ಮತ್ತು ಸಿ–ಡಬ್ಲ್ಯುಎಸ್ ಅನ್ನು ವರ್ಗೀಕರಿಸಿವೆ. ಹಾಗೆಯೇ ಎಲ್ಲ ಆರು ಕೇಂದ್ರಾಡಳಿತ ಪ್ರದೇಶಗಳು ಕೇಂದ್ರದ ಮಾದರಿ ನಿಯಮವನ್ನು ಅನುಸರಿಸಿವೆ. ಬಿಹಾರ, ಜಾರ್ಖಂಡ, ಮಧ್ಯ ಪ್ರದೇಶ, ಮೇಘಾಲಯ, ಪಶ್ಚಿಮ ಬಂಗಾಳ, ಅರುಣಾಚಲ ಪ್ರದೇಶ, ಒರಿಸ್ಸಾ, ಸಿಕ್ಕಿಂ, ಛತ್ತೀಸಘಡ, ಉತ್ತರ ಪ್ರದೇಶ, ಪಂಜಾಬ್, ಗೋವಾ, ಅಸ್ಸಾಂ, ಜಮ್ಮು ಮತ್ತು ಕಾಶ್ಮೀರಗಳು ಸಿ–ಡಿಜಿ ಯನ್ನು ಗುರುತಿಸಿಲ್ಲ ಮತ್ತು ಸಿ–ಡಬ್ಲ್ಯುಎಸ್ ಗೆ ಆದಾಯದ ಮಾನದಂಡವನ್ನು ನಿರ್ಧರಿಸಿಲ್ಲ. ಕೆಳಗಿನ 1 ಮತ್ತು 2 ಕೋಷ್ಟಕಗಳು ಕ್ರಮವಾಗಿ ಸಿ–ಡಿಜಿ ಮತ್ತು ಸಿ–ಡಬ್ಲ್ಯುಎಸ್‌ನ ಮೇಲ್ನೋಟವನ್ನು

ಕೊಡುತ್ತವೆ ಮತ್ತು ವಿಭಾಗೀಕರಣದ ಅಸಮಾನತೆಯನ್ನು ಎತ್ತಿತೋರಿಸುತ್ತವೆ.

ಇಲ್ಲಿ ಸ್ವಾರಸ್ಯಕರ ಸಂಗತಿಯೇನೆಂದರೆ, ಸಿ–ಡಿಜಿ ಮತ್ತು ಸಿ–ಡಬ್ಲ್ಯುಎಸ್‌ಗಳ ನಡುವೆ ಸೀಟು ಹಂಚಿಕೆಗೆ ಆಂಧ್ರಪ್ರದೇಶ ಮತ್ತು ಹರಿಯಾಣ ರಾಜ್ಯಗಳು ಮಾತ್ರ ಒಂದು ಸೂತ್ರವನ್ನು ಒದಗಿಸಿವೆ. ಆಂಧ್ರಪ್ರದೇಶದ ನಿಯಮ 9(4) ರ ಪ್ರಕಾರ ಶೇ 19 ರಷ್ಟು ಸೀಟುಗಳನ್ನು ಸಿ–ಡಿಜಿ ಗೆ ಮುಡಿಪಾಗಿರಿಸಿದ್ದು ಇದರಲ್ಲಿ ಶೇ 10 ರಷ್ಟು ಪ.ಜಾ, ಶೇ 4 ರಷ್ಟು ಪ.ಪಂ, ಶೇ 5 ರಷ್ಟು ಅನಾಥರು, ಎಚ್ ಐ ವಿ ಪೀಡಿತರು ಮತ್ತು ಅಸಮರ್ಥ ಮಕ್ಕಳಗಾಗಿ ಇರಿಸಲಾಗಿದೆ. ಉಳಿದ ಶೇ 6 ರಷ್ಟನ್ನು ಸಿ–ಡಬ್ಲ್ಯುಎಸ್‌ಗಾಗಿ ಕಾಯ್ದಿರಿಸಲಾಗಿದ್ದು ಇದರಲ್ಲಿ ಅಲ್ಪಸಂಖ್ಯಾತರು, ಮತ್ತು ರೂ. 60,000 ದ ವರೆಗೆ ವಾರ್ಷಿಕ ಆದಾಯ ಹೊಂದಿರುವ ಹಿಂದುಳಿದ ಜಾತಿ ಮತ್ತು ಇತರ ಜಾತಿಗಳಗೆ ನೀಡಲಾಗಿದೆ. ಅದೇ ರೀತಿ ಹರಿಯಾಣದ ನಿಯಮ 7 (4) ರ ಪ್ರಕಾರ ಶೇ 5 ರಷ್ಟು ಪ.ಜಾ. ಗಳಗೆ, ಶೇ 4 ರಷ್ಟು ಇತರೆ ಹಿಂದುಳಿದ ಜಾತಿಯ ಪ್ರವರ್ಗ ಎ, ಮತ್ತು 2.5%ನಷ್ಟು ಇತರೆ ಹಿಂದುಳಿದ ಜಾತಿಯ ಪ್ರವರ್ಗ ಬಿ ಗೆ ನೀಡಲಾಗಿದೆ. ಆಂಧ್ರಪ್ರದೇಶ ಮತ್ತು ಹರಿಯಾಣದ ನಿಯಮಗಳು ಶ್ರೇಣೀಕೃತ ಕೋಟಾದಲ್ಲಿ ಅತಿ ದುರ್ಬಲ ವರ್ಗದ ಮಕ್ಕಳಗೆ ಶಿಕ್ಷಣಕ್ಕೆ ಅವಕಾಶ ಸಿಗುವಂತೆ ಮತ್ತು ಶಿಕ್ಷಣ ದೊರೆಯುವಂತೆ ನೋಡಿಕೊಳ್ಳುವ ವ್ಯವಸ್ಥೆಯನ್ನು ಒದಗಿಸಿವೆ.

ಆರ್.ಟಿ.ಇ. ಕಾಯ್ದೆಯು ಶಾಲೆಗಳು ತಾರತಮ್ಯರಹಿತ ವಾಗಿರುವಂತೆ ನೋಡಿಕೊಳ್ಳುವ ಉದ್ದೇಶವನ್ನು ಹೊಂದಿದೆ. ಸರ್ಕಾರ [ಕಲಂ 8 (c)] ಮತ್ತು ಸ್ಥಳೀಯ ಸಂಸ್ಥೆಗಳು [ಕಲಂ 9 (c)] ಸಿ–ಡಿಜಿ ಮತ್ತು ಸಿ–ಡಬ್ಲ್ಯುಎಸ್‌ಗಳು ಶಾಲೆಗಳಲ್ಲಿ ತಾರತಮ್ಯಕ್ಕೆ ಒಳಗಾಗದಂತೆ ಹಾಗೂ ಅವರಿಗೆ ತಾರತಮ್ಯ ಮುಂದುವರೆಸುವುದನ್ನು ತಡೆಗಟ್ಟಲು ಮತ್ತು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಸುವಂತೆ ಮಾಡಲು ಬದ್ಧವಾಗಿವೆ.

ಮಾದರಿ ಆರ್‌ಟಿಇ ನಿಯಮವು ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು, ಪ್ರತಿಯೊಂದು ಶಾಲೆಯೂ ತಾನು ಜಾತಿ/ವರ್ಗ/ಧರ್ಮ/ಲಂಗಾಧಾರಿತ ನಿಂದನೆಗಳಂದ ಮುಕ್ತವಾಗಿದೆ ಎಂದು ಭರವಸೆ ಕೊಡಬೇಕೆಂದು ನಿರ್ಬಂಧಿಸುತ್ತದೆ [ನಿಯಮ 5(3), ಮಾದರಿ ನಿಯಮಗಳು]. ಮಣಿಪುರ ನಿಯಮದ, ನಿಯಮ 5(3) ಮತ್ತು ಆಂಧ್ರ ಪ್ರದೇಶ ನಿಯಮಗಳ, ನಿಯಮ

**ಕೋಷ್ಟಕ 1 ಸಿ–ಡಿಜಿಯ ಒಳಗಿನ ವರ್ಗ**

| ವಂಚಿತರ ವರ್ಗ | ರಾಜ್ಯ |
|---|---|
| ಪ.ಜಾ. ಮತ್ತು ಪ.ಪಂ. | ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳತ ಪ್ರದೇಶ |
| ಹಿಂದುಳದ ವರ್ಗ | ಕರ್ನಾಟಕ, ಗುಜರಾತ್, ತ್ರಿಪುರ, ಹರಿಯಾಣ, ರಾಜಸ್ಥಾನ (ಆದಾಯ 2.5 ಲಕ್ಷದ ವರೆಗೆ) ಮತ್ತು ಉತ್ತರಾಖಂಡ ಹಾಗು ದೆಹಲ (ಕೆನೆಪದರವನ್ನು ಹೊರತುಪಡಿಸಿ). |
| ಶೈಕ್ಷಣಿಕವಾಗಿ ಹಿಂದುಳದ ವರ್ಗ | ನಾಗಾಲ್ಯಾಂಡ್ |
| ಅನಾಥರು | ಆಂಧ್ರಪ್ರದೇಶ, ಕರ್ನಾಟಕ, ಮಣಿಪುರ, ಕೇರಳ, ಉತ್ತರಾಖಂಡ್, ತಮಿಳುನಾಡು, ನಾಗಾಲ್ಯಾಂಡ್ |
| ವಿಶೇಷ ಅವಶ್ಯಕತೆಯುಳ್ಳ ಮಕ್ಕಳು | ಆಂಧ್ರಪ್ರದೇಶ, ಕರ್ನಾಟಕ, ಹಿಮಾಚಲ ಪ್ರದೇಶ, ಮಣಿಪುರ, ರಾಜಸ್ಥಾನ, ದೆಹಲ, ಕೇರಳ ಮತ್ತು ಉತ್ತರಾಖಂಡ್ |
| ವಲಸಿಗರು | ಆಂಧ್ರಪ್ರದೇಶ, ಕರ್ನಾಟಕ |
| ಬೀದಿ ಮಕ್ಕಳು | ಆಂಧ್ರಪ್ರದೇಶ |
| ಹೆಚ್ ಐ ವಿ ಪೀಡಿತ ಮಕ್ಕಳು | ಆಂಧ್ರಪ್ರದೇಶ, ಕರ್ನಾಟಕ, ಮಣಿಪುರ, ಕೇರಳ, ಉತ್ತರಾಖಂಡ್, ತಮಿಳುನಾಡು, ನಾಗಾಲ್ಯಾಂಡ್ |
| ಬಡತನ ರೇಖೆಗಿಂತ ಕೆಳಗಿನವರು | ಮಿಜೊರಾಮ್ |
| ಸಾಂಪ್ರದಾಯಿಕ ವೃತ್ತಿಯವರು | ಕೇರಳ |
| ಬೀದಿ ಗುಡಿಸುವವರ ಮಕ್ಕಳು | ತಮಿಳುನಾಡು |
| ಲಂಗ ಪರಿವರ್ತಿತರು | ಕೇರಳ ಮತ್ತು ತಮಿಳುನಾಡು |
| ಬದಲಾಗುವ ನೋಂದಣಿ ಹೊಂದಿರುವ 14 ಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು | ಕೇರಳ |
| ರೂ 80,000 ಕ್ಕಿಂತ ಕಡಿಮೆ ವಾರ್ಷಿಕ ಆದಾಯವುಳ್ಳ ವಿಧವೆ ಹಾಗೂ ವಿಚ್ಛೇದಿತ ತಾಯಂದಿರ ಮಕ್ಕಳು ಉತ್ತರಾಖಂಡ್ | |
| ರೂ 4.5 ಲಕ್ಷಕ್ಕಿಂತ ಕಡಿಮೆ ವಾರ್ಷಿಕ ಆದಾಯವುಳ್ಳ ಎಚ್ ಐ ವಿ ಪೀಡಿತ/ಅಸಮರ್ಥ ಪೋಷಕರ ಮಕ್ಕಳು ಉತ್ತರಾಖಂಡ್ | |

### ಕೋಷ್ಟಕ 2 ಸಿ–ಡಬ್ಲ್ಯುಎಸ್ ಒಳಗಿನ ವರ್ಗ

| ದುರ್ಬಲ ವರ್ಗ | ರಾಜ್ಯ |
|---|---|
| ಬಿಪಿಎಲ್ | ಅರುಣಾಚಲ ಪ್ರದೇಶ, ಹಿಮಾಚಲ ಪ್ರದೇಶ, ರಾಜಸ್ಥಾನ, ಮಿಜೋರಾಂ, ಗುಜರಾತ್, ಹರಿಯಾಣ, ಕೇರಳ, ತ್ರಿಪುರ |
| ಅನಾಥ/ಎಚ್ ಐ ವಿ ಪೀಡಿತ/ಯುದ್ಧ ವಿಧವೆಯರ ವಿಶೇಷ ಕಾಳಜಿಯ ಅವಶ್ಯಕತೆಯಿರುವ ಮಕ್ಕಳು | ಹರಿಯಾಣ |
| ವಲಸಿಗರ ಹಾಗೂ ನಿರ್ದಿಷ್ಟವಾಗಿ ಸೂಚಿಸಿದ ಗುಂಪು | ಮಹಾರಾಷ್ಟ್ರ |
| ಧಾರ್ಮಿಕ ಅಲ್ಪಸಂಖ್ಯಾತರು | ಮಹಾರಾಷ್ಟ್ರ |
| ಇತರೆ ಹಿಂದುಳಿದ ಜಾತಿ ಮತ್ತು ವಿಶೇಷ ಹಿಂದುಳಿದ ವರ್ಗ | ಮಹಾರಾಷ್ಟ್ರ |
| ರೂ 60,000 ದಷ್ಟು ವಾರ್ಷಿಕ ಆದಾಯವುಳ್ಳ ಹಿಂದುಳಿದ ಹಾಗೂ ಅಲ್ಪಸಂಖ್ಯಾತರ ಗುಂಪು | ಆಂಧ್ರ ಪ್ರದೇಶ |
| ವಾರ್ಷಿಕ ಆದಾಯ | |
| ರೂ 40,000 ಕ್ಕಿಂತ ಕಡಿಮೆ | ಮಣಿಪುರ, ನಾಗಲ್ಯಾಂಡ್ |
| ರೂ 55,000 ಕ್ಕಿಂತ ಕಡಿಮೆ | ಉತ್ತರಾಖಂಡ |
| ಹಿಂದುಳಿದ ಜಾತಿಗೆ ಸೂಚಿಸಿದ ಕೆನೆಪದರಕ್ಕಿಂತ ಕೆಳಗಿನವರು | ಕರ್ನಾಟಕ |
| ರೂ 1 ಲಕ್ಷಕ್ಕಿಂತ ಕಡಿಮೆ | ದೆಹಲಿ, ಮಹಾರಾಷ್ಟ್ರ |
| ರೂ 2 ಲಕ್ಷಕ್ಕಿಂತ ಕಡಿಮೆ | ತಮಿಳುನಾಡು |
| ರೂ 2.5 ಲಕ್ಷ | ರಾಜಸ್ಥಾನ |

6(3) ಇವುಗಳು ಶಾಲೆಗಳಲ್ಲಿ ಜಾತಿ, ವರ್ಗ, ಧರ್ಮ, ಮತ್ತು ಲಿಂಗಾಧಾರಿತವಾಗಿ ದಾಖಲಾತಿ ನಿರಾಕರಿಸುವುದರ ವಿರುದ್ಧ ರಕ್ಷಣೆ ನೀಡುತ್ತವೆ.

ಇದಲ್ಲದೇ, ಮಾದರಿ ನಿಯಮ [5(4)] ಮತ್ತು ರಾಜ್ಯ ನಿಯಮಾವಳಿಯ (ಉ.ದಾ. ಆಂಧ್ರಪ್ರದೇಶದ ನಿಯಮಾವಳಿಯ, ನಿಯಮಗಳು 6(4)] ಸರ್ಕಾರಿ ಶಾಲೆಗಳೂ ಒಳಗೊಂಡಂತೆ, ಅನುದಾನಿತ ಖಾಸಗೀ ಶಾಲೆಗಳಲ್ಲಿ ಅಂತಹಾ ವರ್ಗಕ್ಕೆ ಸೇರಿದ ಪ್ರತಿಯೊಂದು ಮಗುವನ್ನೂ ಬೇರ್ಪಡಿಸದಂತೆ ನೋಡಿಕೊಳ್ಳಲು ಮತ್ತು ತರಗತಿಯಲ್ಲಿ, ಮದ್ಯಾಹ್ನದ ಬಿಸಿಯೂಟದ ಸಮಯದಲ್ಲಿ, ಆಟದ ಮೈದಾನದಲ್ಲಿ, ಎಲ್ಲರ ಬಳಕೆಗೆ ಇರುವ ಕುಡಿಯುವ ನೀರನ್ನು ಹಾಗೂ ಶೌಚಾಲಯವನ್ನು ಉಪಯೋಗಿಸುವಲ್ಲಿ ತಾರತಮ್ಯವನ್ನು ತೋರದಂತೆ, ಶೌಚಾಲಯ ಮತ್ತು ತರಗತಿ ಕೋಣೆಗಳನ್ನು ಶುಚಿಗೊಳಸಲು ಇಂತಹಾ ಮಕ್ಕಳನ್ನು ಬಳಸಿಕೊಳ್ಳದಂತೆ ಸರ್ಕಾರ ಮತ್ತು ಸ್ಥಳೀಯ ಆಡಳಿತ ಮಂಡಳಿಗಳು ಎಚ್ಚರಿಕೆ ವಹಿಸಿ ಮಕ್ಕಳಿಗೆ ರಕ್ಷಣೆ ದೊರೆಯುವಂತೆ ಮಾಡಬೇಕೆಂದು ಕಡ್ಡಾಯವಾದ ಆದೇಶವನ್ನು ಹೊರಡಿಸಿ ಇದರ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿದೆ.

ಅಲ್ಲದೇ ಮಾದರಿ ನಿಯಮ 7 ಮತ್ತು ಆಂಧ್ರ ಪ್ರದೇಶ ನಿಯಮ 8 ಇವು ಪ್ರತಿಯೊಂದು ಅನುದಾನರಹಿತ ಖಾಸಗಿ ಶಾಲೆಗಳು ಮತ್ತು ನಿರ್ದಿಷ್ಟ ಶಾಲೆಗಳಿಗೆ ತರಗತಿಯಲ್ಲಿ ಅಂತಹ ಮಕ್ಕಳನ್ನು ಬೇರ್ಪಡಿಸದಂತೆ ಮತ್ತು ಅವರ ತರಗತಿಯನ್ನು ಬೇರೆ ಸಮಯದಲ್ಲಿ ಬೇರೆ ಸ್ಥಳಗಳಲ್ಲಿ ಮಾಡದಂತೆ ಆದೇಶಿಸುತ್ತದೆ. ಪಠ್ಯಪುಸ್ತಕಗಳು, ಸಮವಸ್ತ್ರಗಳು, ಗ್ರಂಥಾಲಯ ಬಳಕೆ ಮತ್ತು ಐಸಿಟಿಗಳನ್ನೊಳಗೊಂಡ ಸೌಲಭ್ಯಗಳು, ಪಠ್ಯೇತರ ಚಟುವಟಿಕೆ ಮತ್ತು ಆಟೋಟಗಳಲ್ಲಿ ಅವರನ್ನು ಯಾವುದೇ ರೀತಿಯ ತಾರತಮ್ಯಕ್ಕೆ ಒಳಪಡಿಸಬಾರದು ಎಂಬ ಆದೇಶವನ್ನು ನೀಡಿದೆ.

## ಕೊನೆಯ ಮಾತು ಮತ್ತು ಮುಂದಿನ ದಾರಿ

ಕೊನೆಯ ಪ್ರಶ್ನೆ ಏನೆಂದರೆ – ನೂತನ ಆರ್.ಟಿ.ಇ ಆಡಳಿತ ಕ್ರಮವು ಪೌರತ್ವದ ಅಭಿವೃದ್ಧಿ ಮತ್ತು ಸಾಂವಿಧಾನಿಕ ಮೌಲ್ಯಗಳ ಅಭಿವೃದ್ಧಿಗಾಗಿ ಖಾಸಗಿ ಮತ್ತು ಸಾರ್ವಜನಿಕ ಶಾಲೆಗಳ ಸಮನ್ವಯಕ್ಕೆ ನಾಂದಿ ಹಾಡ ಬಲ್ಲದೇ? ಅಥವಾ ಇದು ಹತ್ತರ ಜೊತೆ ಇನ್ನೊಂದು ಕ್ರಮ ಎಂಬಂತೆ ಆಗುವುದೇ? ನಂತರ ಬರುವ ಪ್ರಶ್ನೆ ಎಂದರೆ– ಹಳೆಯ ಸವಾಲುಗಳು ಮತ್ತು ನೂತನ ಆವಶ್ಯಕತೆಗಳಿಗೆ ಇದು ಹೇಗೆ ಪ್ರತಿಕ್ರಿಯಿಸುತ್ತದೆ? ಮತ್ತು ಇವೆರಡರ ಮಧ್ಯೆ ಸಮತೋಲನವನ್ನು ಹೇಗೆ ಕಾಯ್ದುಕೊಳ್ಳುತ್ತದೆ? ಎಂಬುದು.

ಪ್ರಸ್ತುತ ಇರುವ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಈ ಹಂತದಲ್ಲಿ ತಾರತಮ್ಯವನ್ನು ಗುರುತಿಸಲು, ಪತ್ತೆ ಹಚ್ಚಲು, ಎಚ್ಚರಿಸಲು ಮತ್ತು ಪರಿಹರಿಸಲು ಯಾವುದೇ ನಿರ್ದಿಷ್ಟ ಮತ್ತು

ಸಮಾನ ರೀತಿಯ ತಂತ್ರಗಳಲ್ಲ. ಅದಿಲ್ಲದೇ ಇರುವಾಗ ಸಮನ್ವಯ ಶಾಲೆಗಳ ಗುರಿ ತಲುಪಲು ನಿರ್ದಿಷ್ಟ ಗುಣಮಟ್ಟ ಸೂಚಕಗಳನ್ನು ಆಧರಿಸಿ ಒಂದು ಕಾರ್ಯವಿಧಾನ ರೂಪಿಸಿ ಕಾರ್ಯಸಾಧನವನ್ನು ಜಾರಿಗೆ ತರಬೇಕಾದ ಆವಶ್ಯಕತೆ ಇದೆ. ಶಾಲಾ ಸಂಸ್ಥೆಗಳನ್ನು ಪ್ರಜಾಸತ್ತೀಯ, ಭಾಗೀದಾರಿ, ಸಮನ್ವಯ ಮತ್ತು ತಾರತಮ್ಯಮುಕ್ತ ಸಂಸ್ಥೆಯಾಗಿಸಲು ಪಿಆರ್‌ಐ ಅನ್ನು ಒಳಗೊಂಡು ಸಂಸ್ಥೆಗಳು ದಾರಿ ತೋರಿಸಬೇಕು. ಸರ್ವಸಮಾನತೆಯನ್ನು ಸಾಧಿಸಲು ಶಿಕ್ಷಣ ಮತ್ತು ಶಾಲೆಗಳೆರಡೂ ಇರುವ ಸಾಧನ ಹಾಗೂ ಅಂತಿಮ ಗುರಿಗಳಾಗಿರುತ್ತವೆ. ಆದರೆ ಶಿಕ್ಷಣವೊಂದೇ ತನ್ನಷ್ಟಕ್ಕೇ ಏಕಾಂಗಿಯಾಗಿ ಬಿಡುಗಡೆಯ ದಾರಿಯಾಗಲಾರದು. ನಾಗರಿಕರು ಸಕ್ರಿಯವಾದಲ್ಲಿ ಸಂಸ್ಥೆಗಳು ಮೊದಲಿಂದಲೂ ನಡೆಸಿಕೊಂಡು ಬಂದ ತಾರತಮ್ಯದ ನೀತಿಗಳಿಂದ ಅವನ್ನು ಮುಕ್ತಗೊಳಿಸಿ ಶಿಕ್ಷಣ ಸಂಸ್ಥೆಯನ್ನು ಸಕ್ರಿಯ, ಸಮನ್ವಯ ಮತ್ತು ತಾರತಮ್ಯ ಮುಕ್ತ ಸಂಸ್ಥೆಯನ್ನಾಗಿ ಪರಿವರ್ತಿಸುತ್ತದೆ ಮತ್ತು ಸಕ್ರಿಯ, ಸಮನ್ವಯ ಮತ್ತು ತಾರತಮ್ಯ ಮುಕ್ತ ಶಾಲಾ ಸಂಸ್ಥೆಗಳು ಕ್ರಮೇಣ ಸಕ್ರಿಯ ನಾಗರಿಕತ್ವವನ್ನು ಬೆಳಸುತ್ತವೆ. ಇದನ್ನು ಒಬ್ಬಂಟಿಯಾಗಿ ಮಾಡಲು ಸಾಧ್ಯವಿಲ್ಲ. ಸಿ–ಡಿಜಿ ಮತ್ತು ಸಿ–ಡಬ್ಲ್ಯುಎಸ್‌ಗಳನ್ನು ಗುರುತಿಸುವ ರೀತಿ ಮತ್ತು ವಿಶಾಲ ಮೂಲತತ್ವಗಳ ಸ್ಪಷ್ಟ ತಿಳುವಳಿಕೆಗಳ ಬಗೆಗಿನ ವ್ಯಾಖ್ಯಾನ ಹಾಗೂ ಅಳವಡಿಕೆ ಸಮನ್ವಯ ಶಾಲೆಗಳ ಸಾಧನೆಗೆ ಒಂದು ಉತ್ತಮ ಆರಂಭದ ಬಿಂದುವಾಗಬಲ್ಲದು.

**ನದೀಂ**ರವರು ಪ್ರಸ್ತುತ ಗುಜರಾತ್ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದಲ್ಲಿ ಅಂತಾರಾಷ್ಟ್ರೀಯ ಮತ್ತು ತೌಲನಿಕ ಕಾನೂನು ವಿಷಯದಲ್ಲಿ ಸ್ನಾತಕೋತ್ತರ ಅಧ್ಯಯನವನ್ನು ಮಾಡುತ್ತಿದ್ದಾರೆ, ಪ್ರಸ್ತುತ ಗುಜರಾತ್ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದಲ್ಲಿ ಬೋಧಕರು ಮತ್ತು ಸಂಶೋಧನಾ ಸಹ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ ಹಾಗೂ ಏಳು ವರ್ಷಗಳು ನ್ಯಾಯ ಲಭ್ಯತೆಯ ಸಮಸ್ಯೆಗಳ ಬಗ್ಗೆ ಕೆಲಸ ಮಾಡಿದ್ದಾರೆ. ಇವರನ್ನು nadimnikhat@gmail.com ಇಲ್ಲಿ ಸಂಪರ್ಕಿಸಬಹುದು. **ಅನುವಾದಕರು**: ಸುಧಾ ಎಚ್.ಜಿ. **ಪರಿಶೀಲನೆ**: ಜ್ಯೋತಿ ಶಶಿಕುಮಾರ್.